ಡಾ॥ ಹೆಚ್.ಸಿ. ಮಹಾದೇವಪ್ಪ : ಸುಪ್ರೀಂ ಕೋರ್ಟ್ 1997ರ ಡಿಸೆಂಬರ್‌ನಲ್ಲಿ ಪ್ರೊಫೆಷನಲ್ ಬ್ಲಡ್ ಡೊನೇಷನ್ಸ್‌ಗಳನ್ನು ಬಂದ್ ಮಾಡಿದ ಮೇಲೆ, ವಿಶ್ವಬ್ಯಾಂಕಿನ ನೆರವಿನಡಿಯಲ್ಲಿ ರಾಜ್ಯದಲ್ಲಿ ಸುಮಾರು 35 ಬ್ಲಡ್ ಬ್ಯಾಂಕುಗಳನ್ನು ಸ್ಥಾಪನೆ ಮಾಡಬೇಕೆಂದು ನಿರ್ಧಾರ ಮಾಡಿದ್ದೇವೆ. ಈಗ ಪ್ರತಿ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಹಾಗೂ ಏಳು ಹೊಸ ಜಿಲ್ಲಾ ಕೇಂದ್ರಗಳಲ್ಲಿ ಕೂಡ ಸ್ಥಾಪನೆ ಮಾಡಲು ಕ್ರಮ ಕೈಗೊಳ್ಳುತ್ತೇವೆ. ಇದರ ಜೊತೆಗೆ, ಕಾರವಾರದಲ್ಲಿ ಈಗಾಗಲೇ ಕಟ್ಟಡ ಪೂರ್ಣಗೊಂಡಿದ್ದು, ಸಿರ್ಸಿಯಲ್ಲಿ ಮಾಡುವುದಕ್ಕೆ ಕೇಂದ್ರ ಡ್ರಗ್ ಕಂಟ್ರೋಲರ್, ರಾಜ್ಯ ಡ್ರಗ್ ಕಂಟ್ರೋಲರ್ ಮತ್ತು ಇನ್ನೊಬ್ಬ ಎಕ್ಸ್‌ಪರ್ಟ್ಸ್ ಪ್ರತಿನಿಧಿ, ಈ ಮೂರು ಜನರ ಅಭಿಪ್ರಾಯವನ್ನು ಪಡೆದು ಅಲ್ಲ ಅಗತ್ಯವಿದೆಯೇ ಎಂಬುದನ್ನು ನೋಡಿ ಒಂದು ವರ್ಷದಲ್ಲಿ ಅಲ್ಲಿ ಮಾಡಲು ಪ್ರಯತ್ನ ಮಾಡುತ್ತೇನೆ. ಹೊನ್ನಾವರದಲ್ಲಿ ಅಗತ್ಯ ಇದೆಯೇ ಎಂಬುದು ಗೊತ್ತಿಲ್ಲ. ಈ ಎಕ್ಸ್‌ಪರ್ಟ್ಸ್ ಸಮಿತಿ ಅಲ್ಲಿಗೆ ಭೇಟಿ ನೀಡಿ ವರದಿ ಕೊಟ್ಟ ಮೇಲೆ ಅದನ್ನು ಪರಿಶೀಲಿಸಬಹುದು.

ಡಾ॥ ಎಂ.ಪಿ. ಕರ್ಕಿ : ಹೊನ್ನಾವರದಲ್ಲಿ ಸೆಕೆಂಡ್ ಫೇಸಿನಲ್ಲಿ ಇದೆ. ಫಸ್ಟ್ ಫೇಸ್‌ನಲ್ಲಿ ಕಾರವಾರದಲ್ಲಿ ಮಾತ್ರ ಇತ್ತು ಸಿರಸಿ ಮತ್ತು ಹೊನ್ನಾವರ ಸೆಕೆಂಡ್ ಫೇಸಿನಲ್ಲಿ ಇದೆ. ಅದನ್ನು ಫಸ್ಟ್ ಫೇಸಿಗೆ ತಂದರೆ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ. ಬ್ಲಡ್ ತರಲಿಕ್ಕೆ ಈಗ ಗೋವಾಕ್ಕೆ ಇಲ್ಲವೇ ಮಣಿಪಾಲಿಗೆ ಹೋಗಬೇಕಾಗಿದೆ. ಕಾರವಾರದಲ್ಲಿ ಸ್ಥಾಪನೆ ಮಾಡಿದರೂ ಭಟ್ಕಳದವರಿಗೆ 120 ಕಿಲೋ ಮೀಟರ್ ಆಗುತ್ತದೆ.

ಡಾ॥ ಹೆಚ್.ಸಿ. ಮಹದೇವಪ್ಪ : ಪರ್ಯಾಯ ವ್ಯವಸ್ಥೆ ಎಷ್ಟು ಸಾಧ್ಯವಿದೆ ಅಷ್ಟು ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತಿದ್ದೇನೆ. 1, 2, 3, 4 ನೇ ಹಂತವೆನ್ನುವ ಪ್ರಶ್ನೆ ಇಲ್ಲ. ಎಲ್ಲವನ್ನೂ ಒಂದೇ ಪ್ರಮಾಣದಲ್ಲಿ ಮಾಡಲಿಕ್ಕೆ ನಮ್ಮ ಕೆ. ಹೆಚ್. ಎಸ್. ಡಿ. ಪಿ ಅಧಿಕಾರಿಗಳು ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತಿದ್ದಾರೆ. ವಿಶ್ವಬ್ಯಾಂಕಿನ ನೆರವಿನ ಅಡಿಯಲ್ಲಿ ಆರೋಗ್ಯ ಸುಧಾರಣೆಗೆ ಬಂದಂತಹ ಯೋಜನೆಗಳನ್ನು ನಮ್ಮ ರಾಜ್ಯವೇ ಮೊದಲನೆಯದಾಗಿ ಕೆಲಸ ಮಾಡಿದೆ ಎಂಬ ಪ್ರಶಂಸೆಯನ್ನು ಪಡೆದ್ದಿದ್ದಾರೆ. ಕಾರವಾರ ಸಿರಸಿಯಲ್ಲಿ ಈಗಾಗಲೇ ಪ್ರಾರಂಭ ಮಾಡಿದ್ದೇವೆ. ಹೊನ್ನಾವರದಲ್ಲಿ ಇದರ ಅಗತ್ಯ ಇದೆಯೇ ಎಂಬ ಬಗ್ಗೆ ವರದಿ ತರಿಸಿಕೊಂಡು ಪರಿಶೀಲನೆ ಮಾಡುತ್ತೇನೆ.

ಮೊಳಕಾಲ್ಮೂರಿನಲ್ಲಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ನಿರ್ಮಾಣ

106 (675) ಶ್ರೀ ಎಸ್. ವೈ. ಗೋಪಾಲಕೃಷ್ಣ (ಮೊಳಕಾಲ್ಮೂರು) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಮೊಳಕಾಲ್ಮೂರಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವುದು ನಿಜವಲ್ಲವೇ?

2) ಹಾಗಿದ್ದಲ್ಲಿ, ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ ॥ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಪ್ರೌಢ ಶಿಕ್ಷಣ ಸಚಿವರು)

1) ಹೌದು

2) ಹೊಸ ಕಟ್ಟಡ ನಿರ್ಮಿಸಲು ಲೋಕೋಪಯೋಗಿ ಇಲಾಖೆಯಿಂದ ರೂ. 100.00 ಲಕ್ಷಗಳ ನಕ್ಷೆ ಮತ್ತು ಅಂದಾಜುಗಳ ಪಟ್ಟಿಯನ್ನು ಪಡೆಯಲಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎನ್. ವೈ. ಗೋಪಾಲಕೃಷ್ಣ: ಮೊಳಕಾಲ್ಮೂರು ಟೌನ್‌ನಲ್ಲಿ ಫಸ್ಟ್ ಗ್ರೇಡ್ ಕಾಲೇಜು ಕೊಟ್ಟು ಸುಮಾರು 10-15 ವರ್ಷಗಳಾಗಿರಬೇಕು. ಕಾಲೇಜಿಗೆ ಕಟ್ಟಡ ಇಲ್ಲದೆ ಕಾಲೇಜು ಹುಡುಗರು ಎಲ್ಲಾ ವಂತಿಗೆ ಮೇಲೆ ಇಟ್ಟುಕೊಂಡಿರುವ ಶಾಲಾ ಕೊಠಡಿಗಳಲ್ಲಿ ಪ್ರೈಮರಿ ಶಾಲಾ ಕಟ್ಟಡಗಳಲ್ಲಿ ಕೆಲವು ಮರಗಳ ಕೆಳಗಡೆ ಕಾಲೇಜನ್ನು ನಡೆಸುತ್ತಿದ್ದಾರೆ. ಒಂದು ಕೋಟಿ ರೂಪಾಯಿ ಕಾಲೇಜು ಕಟ್ಟಡಕ್ಕೋಸ್ಕರ ಏನು ಒದಗಿಸಿದ್ದೇವೆಂದು ಹೇಳುತ್ತಿದ್ದಾರೆ ಅದೆಲ್ಲಾ ಅಂಡರ್ ಕನ್ಸಿಡರೇಷನ್ ಅಂಡರ್ ಎಕ್ಸಮಿನೇಷನ್ ಎಂದು ಹೇಳುತ್ತಿದ್ದಾರೆ. ಒಂದು ಕೋಟಿ ರೂಪಾಯಿ ಸರಕಾಲಕ್ಕೆ ಕೊಡುವುದಕ್ಕೆ ಆಗದಿದ್ದರೂ ಕೂಡ ಎಷ್ಟು ಸಾಧ್ಯವೋ ಅಷ್ಟನ್ನು ನೀಡಿ ಕನಿಷ್ಠ 2-3 ಶಾಲಾ ಕೊಠಡಿಗಳನ್ನು ಕಟ್ಟಿಸಿಕೊಟ್ಟರೆ ಬಹಳ ಅನುಕೂಲವಾಗುತ್ತದೆ.

ಶ್ರೀ ಹೆಚ್. ಜಿ. ಗೋವಿಂದೇಗೌಡ: ಮಾನ್ಯ ಶಾಸಕರು ಬಹಳ ಚೆನ್ನಾಗಿ ಅರ್ಥ ಮಾಡಿಕೊಂಡಿದ್ದಾರೆ ನನಗೆ ಸಂತೋಷವಾಗುತ್ತದೆ. 50 ಲಕ್ಷ ರೂಪಾಯಿಗಳನ್ನು ಬಜೆಟ್ಟಿನಲ್ಲಿ ಇತ್ತು. ಲೋಕೋಪಯೋಗಿ ಇಲಾಖೆಯ ಒಂದು ಕಟ್ಟಡಕ್ಕೆ ಒಂದು ಕೋಟಿ ರೂಪಾಯಿ ಒದಗಿಸತಕ್ಕಂತಹ ವ್ಯವಸ್ಥೆ ಮಾಡಿದ್ದಾರೆ. ಇಂತಹ ವ್ಯವಸ್ಥೆ ಮಾಡಿದರೂ ಕೂಡ ಹಣ ನಮ್ಮಿಂದಲೇ ಹೋಗಬೇಕು. ತಾವೇನು ಅರ್ಥ ಮಾಡಿಕೊಂಡು ಹೇಳಿದ್ದೀರಿ, ಇದನ್ನು ಕಡಿಮೆ ಮಾಡಬೇಕೆಂದು ಯೋಚನೆ ಮಾಡಿದ್ದೇವೆ. ಲೋಕೋಪಯೋಗಿ ಇಲಾಖಾ ಧಿಕಾರಿಗಳನ್ನು ಕರೆಯಿಸಿ ಈ ರೀತಿ ಅಂದಾಜು ಮಾಡಿದರೆ 25-30 ಕೋಟಿ ಕೂಡ ಸಾಕಾಗುವುದಿಲ್ಲ. ಮುಂದಿನ ಸಾಲಿಗೆ 3 ಕೋಟಿ ಇರತಕ್ಕಂಥಾದ್ದು ಸುಮಾರು 40 ಕೊಠಡಿಗಳ ಅರ್ಧಂಬರ್ಧವಾಗಿದೆ. ಒಂದೊಂದು ಕಟ್ಟಡಕ್ಕೆ 8-10 ಲಕ್ಷ ರೂಪಾಯಿ ಸ್ಟಿಲ್ ಓವರ್ ವರ್ಕ್ಸ್‌ಗೆ ಬೇಕಾಗುತ್ತದೆ. ಬೇರೆ ಕಡೆ ಶಾಲೆಗಳು ನಡೆಯುತ್ತಿದೆ ಅವರಿಗೆ ಗೊತ್ತಿದೆ ನನಗೂ ಗೊತ್ತಿದೆ. ಗ್ರಾಮ ಪಂಚಾಯಿತಿ ಕಛೇರಿಗಳು ಇನ್ನೊಂದು ಕಡೆ ಕಾಲೇಜುಗಳು ನಡೆಯುತ್ತಿದೆ. ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ಅಧಿಕಾರಿಗಳನ್ನು ಇನ್ನು 8-10 ದಿವಸದಲ್ಲಿ ಕರಿಸಿ ಕಡಿಮೆ ಖರ್ಚಿನಲ್ಲಿ 1-2 ರೂಮ್ಸ್‌ಗಳನ್ನು ಕಟ್ಟುವುದಕ್ಕೆ ವ್ಯವಸ್ಥೆ ಮಾಡಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಸುರತ್ಕಲ್ ಆಸ್ಪತ್ರೆಯ ಬಗ್ಗೆ

107 (352) ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ಸುರತ್ಕಲ್ ಪೇಟೆಯ ಮಧ್ಯೆ ಇರುವ ಸರ್ಕಾರೀ ಆರೋಗ್ಯ ಕೇಂದ್ರದ ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಔಷಧ ವಿತರಣೆಯಲ್ಲಿ ಅಸಮರ್ಪಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3) ನೀರಿನ ವ್ಯವಸ್ಥೆ ಇಲ್ಲದೆ ಆರೋಗ್ಯ ಕೇಂದ್ರದ ಸಿಬ್ಬಂದಿ ಮತ್ತು ರೋಗಿಗಳು ತೊಂದರೆ ಅನುಭವಿಸುತ್ತಿರುವುದು ನಿಜವಲ್ಲವೆ?

4) ಕಟ್ಟಡ ರಿಪೇರಿಗಾಗಿ ಮತ್ತು ಇತರೇ ಕೊರತೆಗಳ ನಿವಾರಣೆಗಾಗಿ ಸರ್ಕಾರ ಕೈಗೊಳ್ಳುವ ಕ್ರಮಗಳು